834 (900) Sri Dhinakara Keshava Shetty (Kumata) : Minister for fisheries, Science and Technology,

a) Is there any proposal before the Government to enhance the assistance amount to Rs. 1.25 lakh to construct Houses for the poor fishermen under Mathsyashraya Schemes;

b) If not, what are the reasons, Give complete information?

Sri. Annand Vasanth Asnotikar (Minister for Fisheries, Science and Technology) :

a) No.

b Under the Schemes of Ashraya and Indira Avas a financial assistance of Rs.50,000-00 is being given to construct the Houses for Houseless. In spite of that, Fisheries Department has increased the financial assistance to construct Houses under Mathsyashraya Scheme to Rs.60,000-00 per unit from the year 2011-12 vide, G.O. No.AHF / 176 / SFS / 2011, dated: 29-11-2011.

ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇದಿನಿ ಗ್ರಾಮಕ್ಕೆ ವಿದ್ಯುತ್ ಸರಬರಾಜು

835 (901) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಾತಂತ್ರ್ಯ ಬಂದು 64 ವರ್ಷಗಳಾದರೂ ಕುಮಟಾ ತಾಲ್ಲೂಕಿನ ಸೊಪ್ಪಿನ ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇದಿನಿ ಗ್ರಾಮಕ್ಕೆ ವಿದ್ಯುತ್ ಸರಬರಾಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ಮಾಹಿತಿ ನೀಡುವುದು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಕುಮಟಾ ತಾಲ್ಲೂಕಿನ ಸೊಪ್ಪಿನ ಹೊಸಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇದಿನಿ ಗ್ರಾಮಕ್ಕೆ ವಿದ್ಯುತ್ ಸರಬರಾಜು ಇಲ್ಲದಿರುವುದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಗಮನಕ್ಕೆ ಬಂದಿರುತ್ತದೆ.

ಆ) ಸದರಿ ಗ್ರಾಮ/ಮಜರೆಗೆ ವಿದ್ಯುತ್ ಪೂರೈಸಲು ರಾಜೀವಾ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಬರುವ ಸಪ್ಲಿಮೆಂಟರಿ ವಿಸ್ತೃತ ಯೋಜನಾ ವರದಿಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಗ್ರಾಮಕ್ಕೆ ಸುಮಾರು 12 ಕಿ.ಮೀ. ಉದ್ದದ 11 ಕೆ.ವಿ. ಮಾರ್ಗವನ್ನು ಶಿವಮನೆ ಗ್ರಾಮದಿಂದ ಅಳವಡಿಸಬೇಕಾಗಿದ್ದು, ಈ ಕಾಮಗಾರಿಗಳ ಅಂದಾಜು ವೆಚ್ಚ ರೂ.51 ಲಕ್ಷಗಳಾಗಿರುತ್ತದೆ. ಪ್ರಸ್ತುತ ಶಿವಮನೆ ಗ್ರಾಮದ ವಿದ್ಯುದೀಕರಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಅಂಗನವಾಡಿ ಮಕ್ಕಳಿಗೆ ಕುರ್‌ಕುರೆ ಆಹಾರವನ್ನು ರದ್ದು ಮಾಡಿರುವುದು

836 (902) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಮಕ್ಕಳಿಗೆ "ಕುರ್ ಕುರೆ" ಆಹಾರವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ "ಕುರ್ ಕುರೆ" ನೀಡುವುದರಿಂದ ಮಕ್ಕಳ ಆರೋಗ್ಯಕ್ಕೆ ತೊಂದರೆಯಾಗುತ್ತಿದ್ದು ಬದಲಿ ವ್ಯವಸ್ಥೆಯಾಗಿ ಬ್ರೆಡ್ ಹಾಲನ್ನು ನೀಡಲು ಸರ್ಕಾರ ಕ್ರಮಕ್ಕೈಗೊಳ್ಳುವುದೇ ಮಾಹಿತಿ ನೀಡುವುದು?

ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಅಂಗನವಾಡಿ ಮಕ್ಕಳಿಗೆ "ನ್ಯೂಟ್ರಿ ಕಾರನ್ ಪಾಪ್" ನೀಡಲಾಗುತ್ತಿದೆ.

ಆ) ಈ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ. ಜನವರಿ ಮೊದಲನೇ ವಾರದಲ್ಲಿ ಮಹಿಳಾ ಪೂರಕ ಪೌಷ್ಟಿಕ ಆಹಾರ ಘಟಕಗಳಿಂದ ಸರಬರಾಜಾಗುತ್ತಿರುವ ಆಹಾರ ಪದಾರ್ಥಗಳಲ್ಲಿ ಬದಲಾವಣೆ ತರಲಾಗುತ್ತಿದ್ದು, ಸ್ಥಳೀಯ ಜನರ ಬೇಡಿಕೆಗನುಗುಣವಾಗಿ ಆಹಾರವನ್ನು ಪಡೆಯಬಹುದಾಗಿರುತ್ತದೆ.